## ಶಿಶುಗಳ ಹೃದಯಾರೋಗ್ಯಕ್ಕೆ

ನವಜಾತ ಶಿಶುಗಳಿಗೆ ತಾಯಿಯ ಎದೆ ಹಾಲೇ ಅತ್ಯಮೂಲ್ಯ ಆಹಾರ. ಅದರಿಂದ ಶಿಶುಗಳಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಯಾಗುತ್ತದೆ. ತಾಯಿ ಹಾಲು ಮಗುವಿನ ಸಮತೋಲನ ಬೆಳವಣಿಗೆಗೆ ನೆರವಾಗುತ್ತದೆ ಎಂದು ಈ ಹಿಂದಿನ ಅಧ್ಯಯನಗಳು ಹೇಳಿದ್ದವು. ಆದರೆ, ಇತ್ತೀಚಿನ ಅಧ್ಯಯನ ಅವಧಿಪೂರ್ವದಲ್ಲಿ ಜನಿಸಿದ ಮಕ್ಕಳಿಗೆ ಹೃದ್ರೋಗದ ಸಮಸ್ಯೆ ಕಾಡುವ ಸಾಧ್ಯತೆಯೂ ಇರುತ್ತದೆ. ಅಂತಹ ಸಂದರ್ಭದಲ್ಲಿ ತಾಯಿಯ ಹಾಲೇ ಮಕ್ಕಳನ್ನು ಅಪಾಯದಿಂದ ದೂರ ಮಾಡುತ್ತದೆ ಎನ್ನುವ ಅಂಶವನ್ನೂ ಸಂಶೋಧಕರು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನವಜಾತ ಶಿಶುವಿಗೆ ಆರಂಭದ ಐದು ತಿಂಗಳು ತಾಯಿಯ ಹಾಲನ್ನೇ ನೀಡುವುದು ಸೂಕ್ತ ಎನ್ನುವ ಅಂಶವನ್ನು ಸಂಶೋಧಕರು ಹೇಳಿದ್ದಾರೆ.

ಮಗು ಜನಿಸಿದ ಕ್ಷಣದಿಂದಲೇ ತಾಯಿಯ ಹಾಲು ಕುಡಿಸಿದರೆ ಆ ಮಗುವಿನಲ್ಲಿ ಬೆಳೆಯಬಹುದಾದ ಹೃದಯ ಸಮಸ್ಯೆ ತಪ್ಪಿಸಬಹುದು. ತಾಯಿ ಎದೆ ಹಾಲಿನಲ್ಲಿ ಮಗುವಿನ ಸಮಗ್ರ ಬೆಳವಣಿಗೆಗೆ ಅನುಕೂಲವಾಗುವ ಹಾರ್ಮೋನುಗಳು ದೊರೆಯುತ್ತವೆ. ನವಜಾತ ಶಿಶುಗಳ ಚಯಾಪಚಯ ಕ್ರಿಯೆನ್ನು ಸುಧಾರಿಸಲೂ ಅದು ಸಹಾಯ ಮಾಡುತ್ತದೆ ಎನ್ನುವುದು ಸಂಶೋಧಕರ ಅಭಿಪ್ರಾಯ.

## ಮಕ್ಕಳಿಗೆ ಅತಿ ಆ್ಯಂಟಿಬಯೋಟಿಕ್ಸ್



ಎಳೆಯ ಮಕ್ಕಳು ಅದರಲ್ಲೂ ನಾಲ್ಕು ವರ್ಷದ ಒಳಗಿನ ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆ್ಯಂಟಿಬಯೋಟಿಕ್ಸ್‌ಗಳನ್ನು (ಪ್ರತಿಜೀವಕ) ಖಾಸಗಿ ವೈದ್ಯರು ನೀಡುತ್ತಿದ್ದಾರೆ ಎಂದು ಭಾರತೀಯ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನದ ಅಧ್ಯಯನ ಹೇಳಿದೆ.

ಅಧ್ಯಯನ ಕೈಗೊಂಡ ಸಂಶೋಧಕರು ನಾಲ್ಕು ವರ್ಷದೊಳಗಿನ ಮಕ್ಕಳಿಗೆ ವೈದ್ಯರು ಆ್ಯಂಟಿಬಯೋಟಿಕ್ಸ್ ಶಿಫಾರಸ್ಸು ಮಾಡಿದ ಪ್ರಮಾಣ ಹೆಚ್ಚಿದೆ ಎನ್ನುವ ಅಂಶವನ್ನು ಮೇ 2013ರಿಂದ ಏಪ್ರಿಲ್ 2014 ಅವಧಿಯಲ್ಲಿ ವೈದ್ಯರ ಶಿಫಾರಸ್ಸಿನ ಆಧಾರದ ಮೇಲೆ ಹೇಳಿದ್ದಾರೆ.

ಅದರಲ್ಲೂ ಆ ವಯಸ್ಸಿನ ಮಕ್ಕಳ ಶ್ವಾಸಕೋಶ ಸಂಬಂಧಿ ಸಮಸ್ಯೆಗೆ ಐದನೇ ಒಂದು ಭಾಗದಷ್ಟು ಆ್ಯಂಟಿಬಯೋಟಿಕ್ಸ್ ಶಿಫಾರಸ್ಸು ಮಾಡಿದ್ದು ಕಂಡುಬಂದಿದೆ. ಅದರ ಅಗತ್ಯ ಅಷ್ಟಾಗಿ ಇರುವುದಿಲ್ಲ ಎನ್ನುವುದು ಸಂಶೋಧಕರ ಅಭಿಪ್ರಾಯ.

ವಯಸ್ಕರಿಗೆ ಹೋಲಿಸಿ ನೋಡಿದರೆ ಎಳೆಯರಿಗೆ ಆ್ಯಂಟಿಬಯೋಟಿಕ್ಸ್ ಹೆಚ್ಚು ಶಿಫಾರಸ್ಸು ಮಾಡಲಾಗಿದೆ. 5190 ಲಕ್ಷ ಮಂದಿಗೆ ಔಷಧೋಪಚಾರ ನೀಡಿರುವ ಅಂಕಿಅಂಶವನ್ನು ಅವರು ತೆಗೆದುಕೊಂಡಿದ್ದರು. ಆ ಒಂದು ವರ್ಷದ ಅವಧಿಯಲ್ಲಿ ಒಂದು ಸಾವಿರ ವಯಸ್ಕರಲ್ಲಿ 412 ಮಂದಿಗೆ ಆ್ಯಂಟಿಬಯೋಟಿಕ್ಸ್ ನೀಡಿದ್ದರೆ, 1000 ಎಳೆಯ (0–4 ವರ್ಷ) ಮಕ್ಕಳಲ್ಲಿ ಅದರ ಪ್ರಮಾಣ 636 ಇತ್ತು. ಆದರೆ, ಅದೇ 10ರಿಂದ 19 ವರ್ಷದ ಮಕ್ಕಳಿಗೆ ತೀರ ಕಡಿಮೆ ಅಂದರೆ 280 ಆ್ಯಂಟಿಬಯೋಟಿಕ್ಸ್ ನೀಡಿದ್ದ ದಾಖಲೆ ಇದೆ. ಇಷ್ಟಾದರೂ ಯೂರೋಪ್ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಅದರ ಪ್ರಮಾಣ ಕಡಿಮೆ ಎಂದೇ ಅವರು ವಾದಿಸಿದ್ದಾರೆ.

## ಧೂಮದಿಂದ ಮೂಳೆ ದುರ್ಬಲ

ಬೊಜ್ಜು ಇರುವ ವ್ಯಕ್ತಿ ಧೂಮ ವ್ಯಸನಿಯಾಗಿದ್ದರೆ ಅವರ ಮೂಳೆ ದುರ್ಬಲವಾಗುತ್ತವೆ ಎಂದು ಸಂಶೋಧಕರ ಅಧ್ಯಯನ ದೃಢಪಡಿಸಿದೆ.

ಬೊಜ್ಜಿದ್ದೂ ಧೂಮಪಾನವನ್ನು ಮಾಡುತ್ತಿದ್ದವರಿಗೆ ಏನಾದರೂ ಮೂಳೆ ಮುರಿತ ಇಲ್ಲವೇ ಮೂಳೆಗೇನಾದರೂ ಪೆಟ್ಟಾದಾಗ ಶಸ್ತ್ರಚಿಕಿತ್ಸೆಯ ಮೂಲಕ ಗುಣಪಡಿಸುವುದು ಸ್ವಲ್ಪ ಕಷ್ಟದಾಯಕ ಕೆಲಸ ಎನ್ನುವುದು ಅಧ್ಯಯನದ ಸಾರ.

ಧೂಮಪಾನಿಗಳಲ್ಲಿ ಆರೋಗ್ಯದ ಗುಣಮಟ್ಟವೂ ಕೆಳಮಟ್ಟದ್ದಾಗಿರುತ್ತದೆ. ಬೊಜ್ಜು ಮತ್ತು ಧೂಮಪಾನ ಈ ಎರಡೂ ಆರೋಗ್ಯವನ್ನು ಹದಗೆಡಿಸುತ್ತವೆ. ಅಷ್ಟು ಮಾತ್ರವಲ್ಲದೆ ದೀರ್ಘಕಾಲ ಅದು ಅಪಾಯವನ್ನು ಉಂಟುಮಾಡುವ ಸಾಧ್ಯತೆಯೂ ಇದೆ. ಸಂಶೋಧಕರು 2006ರಿಂದ 2017ರವರೆಗೆ ನಡೆದ ಮೂಳೆ ಸಂಬಂಧಿತ ಶಸ್ತ್ರಚಿಕಿತ್ಸೆಯ ಅಂಕಿಅಂಶಗಳನ್ನು ಇಟ್ಟುಕೊಂಡು ವಿಶ್ಲೇಷಣೆಯನ್ನು ಮಾಡಿದ್ದಾರೆ.

## ಅತಿಸಾರಕ್ಕೆ ಲಸಿಕೆ

ಸಂಶೋಧಕರು ಅತಿಸಾರ ನಿರ್ಮೂಲನೆಗೆ ಹೊಸ ಲಸಿಕೆಯೊಂದನ್ನು ಅಭಿವೃದ್ಧಿಪಡಿಸಿದ್ದು, ಪರೀಕ್ಷಾರ್ಥ ನಡೆಸಿದ ಪ್ರಯೋಗವೂ ಯಶಸ್ವಿಯಾಗಿದೆ. ಬಾಂಗ್ಲಾದೇಶದಲ್ಲಿ ನಡೆಸಿದ ಕ್ಲಿನಿಕಲ್ ಪ್ರಯೋಗದಲ್ಲಿ ಅತಿಸಾರ ನಿಯಂತ್ರಕ ಲಸಿಕೆ ಸುರಕ್ಷಿತ ಮತ್ತು ಪರಿಣಾಮಕಾರಿ ಎನ್ನುವುದು ದೃಢಪಟ್ಟಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಕೆಲವೊಂದು ಬ್ಯಾಕ್ಟೀರಿಯಾಗಳು ಅತಿಸಾರಕ್ಕೆ ಕಾರಣ. ಆರ್ಥಿಕವಾಗಿ ಹಿಂದುಳಿದ ಮತ್ತು ಮಧ್ಯಮ ವರ್ಗದ ದೇಶಗಳಲ್ಲಿ ಹೆಚ್ಚಾಗಿ ಅದು ಕಾಣಿಸಿಕೊಳ್ಳುತ್ತದೆ. ಅದರಲ್ಲೂ ಮಕ್ಕಳು ಇದರಿಂದ ಸಾವಿಗೆ ತುತ್ತಾದ ಸಂದರ್ಭಗಳು ಸಾಕಷ್ಟಿವೆ. ಲಸಿಕೆ ಹಾಕಿಸುವುದು ಶಿಶುಗಳಲ್ಲಿ ಕರುಳಿನ ರೋಗನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಲಸಿಕೆಯನ್ನು ಉತ್ಪಾದಿಸಲು ಆದ್ಯತೆ ತೆಗೆದುಕೊಳ್ಳಬೇಕು ಎಂದು ತಜ್ಞರು ಹೇಳಿದ್ದಾರೆ.

■ ಟಿಪ್ಸ್


ಸಂಧಿಲಿನ್
SANDHILIN सन्धिलिन

ಗಂಟು ನೋವು,
ಬೆನ್ನು ನೋವು,
ಮಾಂಸ ಖಂಡಗಳ ಸೆಳೆತ,
ನರ, ವಾತ ಸಂಬಂಧಿ

ನೋವಿಗೆ
ಶೀಘ್ರ
ಪರಿಣಾಮಕಾರಿ

CLINICALLY PROVED




◆ ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.